# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ಎರಡು ಸಾರಿ ಜೀವಿಸಿದ ಹುಡಿಗಿ


ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen



60ರ 49ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada

ಯಾಯಿರನು ಯಹೊದ್ಯರನಾಯಕನಾಗಿದ್ದು ದೇವರ ವಾಕ್ಯಗಳನ್ನು ಬೇರೆಯವರಿಗೆ ಕಲಿಸುತ್ತಿದ್ದನು. ಒಂದು ದಿನ ಅವನು ಭಯಂಕರವಾದ ತೊಂದರೆಗೊಳಗಾದನು, ಅವನ ಪ್ರೀತಿಯ ಮಗಳು ರೋಗಸ್ಥಳಾದಳು. ಆ ರೋಗವು ಭಯಂಕರವಾಗಿರುವುದರಿಂದ ಯಾರು ಸಹಾಯ ಮಾಡುವುದಕ್ಕೆ ಮುಂದೆ ಬರಲಿಲ್ಲ, ಕಂಡಿತವಾಗಿ ಅವಳು ಸಾಯುತ್ತಾಳೆಂದು ಯಾಯಿರನು ತಿಳಿದುಕೊಂಡಿದ್ದನು.



1

ಒಬ್ಬನಿಂದ ಮಾತ್ರವೇ ನನ್ನ ಮಗಳು ಬದುಕುವುದಕ್ಕೆ ಸಾದ್ಯವೆಂದು ಯಾಯಿರನು ತಿಳಿದು ಯೇಸುವನ್ನು ತನ್ನ ಮನೆಗೆ ಕರೆದುಕೊಂಡು ಬರುವುದಕ್ಕೆ ಅವನನ್ನು ಹುಡುಕುತ್ತ ಹೋದನು. ಧರ್ಮದ ನಾಯಕರು ಇದನ್ನು ಕಂಡಿತವಾಗಿ ಯೇಸುವಿನ ಅಗಮನವನ್ನು ಒಪ್ಪುವುದಿಲ್ಲ ಎಂದು ಯಾಯಿರನು ತಿಳಿದಿದ್ದನು. ಆದರೆ ಯಾಯಿರನು ಹೆದರೆದೆ ಅವನ ಮಗಳು ಗುಣವಾಗಬೇಕೆಂದು ಬಯಸಿದನು.



2



ಯಾಯಿರನು ಜನಗಳ ಮಧ್ಯದಲ್ಲಿರುವ ಯೇಸುವನ್ನು ಕಂಡು ಆತನ ಮುಂದೆ ಮೊಣಕಾಲೂರಿದನು. ಸ್ವಾಮಿ ನನ್ನ ಒಬ್ಬಳೆ ಮಗಳು ರೋಗಕ್ಕೆ ತುತ್ತಾಗಿ ಸಾಯುವ ಅಂಚಿನಲ್ಲಿದ್ದಳೆ ನೀನು ಬಂದು ನಿನ್ನ ಕೈನೀಡಿ ನನ್ನ ಮಗಳನ್ನು ಮುಟ್ಟಿದರೆ ಗುಣವಾಗುವಳು ಎಂದು ಬೇಡಿಕೊಂಡನು.

3



ಯೇಸು ಯಾಯಿರನ ಜೊತೆಯಲ್ಲಿ ಹೋದನು ಆದರೆ ಜನಗಳ ಒತ್ತಡ ಜಾಸ್ತಿ ತುಂಬಾ ಇದ್ದುದರಿಂದ ಬೇಗನೆ ಹೋಗುವುದಕ್ಕೆ ಆಗಲಿಲ್ಲ. ಹನ್ನೆರೆಡು ವರ್ಷಗಳಿಂದ ರೋಗಿಯಾಗಿ ಎಲ್ಲಾ ವೈದರನ್ನು ನೋಡಿದರು ಗುಣವಾಗದೆ, ಇರುವಂತ ಎಲ್ಲಾ ಹಣವೆಲ್ಲಾ ಕಳೆದುಕೋಂಡರು ಸಹ ಅವಳಿಗೆ ಗುಣವಾಗಿರಲಿಲ್ಲ. ಹಿಗಿದ್ದಾಗ ಅವಳು ಯೇಸುವನ್ನು ಹೇಗೆ ನೋಡಬಹುದು?

4



ಆ ಸ್ತ್ರೀಯು ಏನನ್ನು ಮಾಡಬಹುದು? ಒಂದುವೇಳೆ ಆತನ ಉಡುಪನ್ನು ಮಟ್ಟಿದರೆ ಅವಳಿಗೆ ಗುಣವಾಗಬಹುದು ಅಂದುಕೊಂಡು ಯೇಸುವಿನ ಉಡುಪಿನ ಗೊಂಡೆಯನ್ನು ಮಟ್ಟಿದಳು.

5

ಅಲ್ಲಿ ಅದ್ಬುತ ನಡೆಯಿತು!! ಆ ಸ್ತ್ರೀಯಳಿಗೆ ಗುಣವಾಯಿತು. ಅವಳು ಸಂಪೂರ್ಣವಾಗಿ ಸರಿಯಾದೆನೆಂದು ಅಂದುಕೊಂಡಳು. ಅಲ್ಲಿಂದ ಒಂದು ಧ್ವನಿ ಬಂತು ಯೇಸುವು 'ಯಾರು ನನ್ನನ್ನು ಮುಟ್ಟಿದರೆಂದು ಕೇಳಿದನು?' ಆಗ ಆ ಸ್ತ್ರೀಯು ತನಗಾದಂತಹ ಎಲ್ಲಾ ಸಂಗತಿಯನ್ನು ಯೇಸುವಿಗೆ ತಿಳಿಸಿದಳು.



6

ಹಾಗೆ ಯೇಸುವು ಮಾತಾಡುತ್ತ ಇರುವಾಗ ಯಾಯಿರನ ಸೇವಕರು ಬಂದು ನಿನ್ನ ಮಗಳು ಸತ್ತು ಹೋದಳು ಅಂದರು. ಯಾಯಿರನು ಮುದ್ದಾದ ಮಗಳನ್ನು ಕಳೆದುಕೊಂಡನು.



7

ಆ ಮಾತನ್ನು ಕೇಳಿದ ಯೇಸುವು ಭಯಪಡಬೇಡ ನಂಬಿಕೆ ಮಾತ್ರವಿರಲಿ, ಅವಳು ಬದಕುವಳು ಅಂದನು. ಆದರೆ ಯಾಯಿರನ ಮಗಳು ಸತ್ತು ಹೋದುದ್ದರಿಂದ ಅವನಿಗೆ ಯೇಸುವನ್ನು ನಂಬುವುದಕ್ಕೆ ಎಷ್ಟೋ ಕಷ್ಟವಾಗಿರಬಹುದು.



8

ಆ ಮನೆಯಲ್ಲಿ ಎಲ್ಲಾರು ಅಳುತ್ತ ಮತ್ತು ಗೋಳಾಡುತ್ತ ಇರುವಾಗ ಯೇಸುವು ಅವರಿಗೆ ‘ಅಳಬೇಡಿರಿ ಅವಳು ಸತ್ತಿಲ್ಲ ನಿದ್ದೆ ಮಾಡುತ್ತ ಇದ್ದಾಳೆ’ ಎಂದಾಗ ಎಲ್ಲಾರು ಯೇಸುವನ್ನು ನೋಡಿ ನಗೆಯಾಡಿದರು. ಏಕೆಂದರೆ ಅವಳು ಸತ್ತು ಹೋಗಿದ್ದಾಳೆಂದು ಅವರಿಗೆ ಗೊತ್ತಿತ್ತು.



9

ಯೇಸುವು ಎಲ್ಲಾರನ್ನು ಹೊರಗೆ ಕಳಿಸಿ ಆ ಹುಡಿಗಿಯ ಕೈಯನ್ನು ಹಿಡಿದಿ ‘ಅಮ್ಮಣ್ಣಿ ಏಳು’ ಎಂದನು ಆ ಹುಡಿಗಿ ಎದ್ದಳು. ಯೇಸುವಿನ ಮೂರು ಶಿಷ್ಯರು, ಯಾಯಿರನು ಮತ್ತು ಅವನ ಹೆಂಡತಿ ಮಾತ್ರವೆ ಒಳಗೆ ಇದ್ದರು, ಆ ಸತ್ತ ಹುಡಿಗಿಯು ಸೇರಿ ಎಲ್ಲರು ಯೇಸುವಿನ ಮಾತನ್ನು ಕೇಳಿದರಾ?



10

ಆ ಸತ್ತ ಹುಡಿಗಿಯು ಯೇಸುವಿನ ಮಾತನ್ನು ಕೇಳಿದಳು. ಆವಳ ಆತ್ಮವು ತಿರುಗಿ ಅವಳಲ್ಲಿ ಸೇರಿತು, ಸಾವಿನಿಂದ ಮೇಲಕ್ಕೆ ಎದ್ದಳು.



11

ಆ ಹುಡುಗಿಯ ತಂದೆ ತಾಯಿಯೂ ಆಶ್ಚರ್ಯಚಕಿತರಾದರು, ಯೇಸು ಅವರಿಗೆ ‘ಏನಾದರು ಅವಳಿಗೆ ತಿನ್ನುವುದಕ್ಕೆ ಕೊಡಿರಿ’ ಎಂದನು. ಅವರ ಮಗಳು ತಿರುಗಿ ಬದುಕಿ ಬಂದಿದ್ದರಿಂದ ಅವರು ಯೇಸುವಿಗೆ ಎಷ್ಟು ಸಂತೋಷ, ಕೃತಜ್ಞತೆವುಳ್ಳವರಾಗಿರಬಹುದು. ಯೇಸುವಿನ ಅತಿಶಯವಾದ ಪ್ರೀತಿ ಮತ್ತು ಶಕ್ತಿ ಅವಳನ್ನು ಮರಣದಿಂದ ಎಬ್ಬಿಸಿತು.



12

ಎರಡು ಸಾರಿ ಜೀವಿಸಿದ ಹುಡಿಗಿ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಮಾರ್ಕ 5, ಲೂಕ 8

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.